# ೩೦. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಪಂಡರಹಳ್ಳಿ

## "ಭದ್ರಾವತಿಯ ಮೂಲೆಯಲ್ಲೊಂದು ಮುತ್ತಿನಂಥ ಶಾಲೆ "

ಸರ್ಕಾರಿ ಶಾಲೆಗಳು ಉತ್ತಮ ಸಾಧನೆ ಮಾಡುತ್ತಿರುವ ಸಂದರ್ಭಗಳನ್ನು ಮಾಧ್ಯಮಗಳಲ್ಲಿ ಇತ್ತೀಚೆಗೆ ಕಾಣುತ್ತಿದ್ದೇವೆ. ಸುದ್ದಿ ಮತ್ತು ಮಾಹಿತಿಯಿಯೇ ಎಲ್ಲವೂ ಆಗಿರುವ ಈ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಸಾಧಕರನ್ನು ಗುರುತಿಸುವುದೇ ಗೊಂದಲಮಯ. ಕೆಲ ಸಾಧಕರು ತಮ್ಮನ್ನು ತಾವೇ ಮುನ್ನೆಲೆಗೆ ತಂದು ಕೊಂಡರೆ, ಕೆಲವರನ್ನು ಬೇರೆಯವರು ಬೆಳಕಿಗೆ ತಂದು ಹೊರ ಜಗತ್ತಿಗೆ ತೋರಿಸಬೇಕಾಗುತ್ತದೆ. ಎರಡನೇ ಗುಂಪಿಗೆ ಸೇರುವ ಮೌನ ಸಾದನೆ ಮಾಡಿದ ಶಾಲೆಯೊಂದು ಭದ್ರಾವತಿಯ ಗಡಿಯಂಚಿನ ಮೂಲೆಯಲ್ಲಿದೆ. ತಾಲ್ಲೂಕು ಕೇಂದ್ರದಿಂದ 25 ಕಿ.ಮೀ. ದೂರದಲ್ಲಿರುವ ಪಂಡರಹಳ್ಳಿ ಎಂಬ ಪುಟ್ಟ ಗ್ರಾಮದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯೇ ಇಂತಹ "ಭದ್ರಾವತಿಯ ಮೂಲೆಯಲ್ಲೊಂದು ಮುತ್ತಿನಂತಹ ಶಾಲೆ".

### ಗ್ರಾಮಸ್ಥರಿಂದಲೇ ಸ್ವತಂತ್ರ ದಿನಾಚರಣೆ:–

ಇಡೀ ಊರಿಗೇ ಊರೇ ಶಾಲೆಗೆ ಬಂದು ಮುಂದೆ ನಿಂತು, ತಮ್ಮ ಮನೆಯ ಹಬ್ಬವೇನೋ ಎಂಬ ರೀತಿಯಲ್ಲಿ ಪ್ರತೀ ವರ್ಷವೂ ಸ್ವತಂತ್ರ ದಿನಾಚರಣೆಯನ್ನು ನಡೆಸಿಕೊಡುವುದನ್ನು ಎಲ್ಲಾದರೂ ಕೇಳಿದ್ದೀರಾ? ಇಂತಹ ವಿಭಿನ್ನ ಮತ್ತು ವಿಶೇಷ ಸಂದರ್ಭಕ್ಕೆ ಭದ್ರಾವತಿಯ ಪಂಡರಹಳ್ಳಿ ಗ್ರಾಮವು ಪ್ರತೀ ವರ್ಷವೂ ಸಾಕ್ಷಿಯಾಗುತ್ತದೆ. ಹಿರಿಕಿರಿಯಾದಿಯಾಗಿ ಗ್ರಾಮಸ್ಥರೆಲ್ಲರೂ ಸ್ವತಂತ್ರ ದಿನಾಚರಣೆಯ ಹಿಂದಿನ ದಿನವೇ ಶಾಲೆಗೆ ಬಂದು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನೇತೃತ್ವದಲ್ಲಿ ಸಭೆ ಸೇರುವರು. ಆ ದಿನದಂದು ನಡೆಸಬೇಕಾದ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸುವರು. ಇದಕ್ಕೆ ತಗುಲುವ ಎಲ್ಲಾ ವೆಚ್ಚವೂ ಗ್ರಾಮಸ್ಥರದ್ದೇ. ಹಿಂದಿನ ದಿನದಿಂದಲೇ ತಯಾರಿಯು ನಡೆದು ಶಾಲೆಯು ಬಾಳೆಕಂದು, ಮಾವಿನಸೊಪ್ಪಿನ ತೋರಣ, ಹೂಗಳು ಮತ್ತು ರಂಗೋಲಿಗಳಿಂದ ಶಾಲೆಯು ಮದುವಣಗಿತ್ತಿಯಂತೆ ಸಿಂಗಾರಗೊಳ್ಳುವುದು. ನಿಗದಿತ ಸಮಯಕ್ಕೆ ಗ್ರಾಮದ ಮಕ್ಕಳು, ಹಿರಿಯರು ಕಿರಿಯರಾದಿಯಾಗಿ ಧ್ವಜಾರೋಹಣದಲ್ಲಿ ಪಾಲ್ಗೊಳ್ಳುವರು. ಹಳ್ಳಿಯೊಂದಕ್ಕೆ ಹೆಸರಾಂತ ಸಿನಿಮಾ ನಟಿ ಅಥವಾ ಕ್ರೀಡಾಪಟು ಬಂದರೆ ಉದ್ಭವಿಸುವ ಉಲ್ಲಾಸದ ಅಲೆಗಳು ಅಂದು ಗ್ರಾಮದಲ್ಲಿಯೂ ಏಳುವುವು. ಶಾಲೆಯೇ ಅಂದಿನ ಆಕರ್ಷಣೆಯ ಕೇಂದ್ರ ಬಿಂದು. ಧ್ವಜಾರೋಹಣದ ನಂತರ ಮಕ್ಕಳು ಮತ್ತು ಗ್ರಾಮಸ್ಥರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವುವು. ಮಧ್ಯಾಹ್ನದ ಹೋಳಿಗೆಯ ಭೂರಿ ಭೋಜನದ ನಂತರವೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವುವು. ಇಂತಹ ಸಡಗರ ಸಂಭ್ರಮಗಳಿಂದ ನಡೆಯುವ ಸ್ವತಂತ್ರ ದಿನಾಚರಣೆಯು ಭದ್ರಾವತಿ ತಾಲ್ಲೂಕಿನಲ್ಲಿಯೇ ವಿಭಿನ್ನ ಮತ್ತು ವಿಶೇಷವಾಗಿರುವುದು ಅಚ್ಚರಿಯೇನಲ್ಲ.

### ಗ್ರಾಮದ ಆಕರ್ಷಣೆಯ ಕೇಂದ್ರ :–

ಹೆಚ್ಚು ಜನಸಂಖ್ಯೆಯನ್ನೇನೂ ಹೊಂದಿರದ ಪಂಡರಹಳ್ಳಿಯು ಭದ್ರಾನಾಲೆಯ ಪಕ್ಕದಲ್ಲಿರುವ, ಗುಡ್ಡಗಳ ಮಧ್ಯದ ಹಸಿರಿನ ನಡುವಿನ ಚಂದದ ಗ್ರಾಮ. ಗ್ರಾಮದ ಪ್ರಮುಖ ಆಕರ್ಷಣೆಯೇ ಶಾಲೆ. ಗ್ರಾಮಕ್ಕೆ ಪ್ರವೇಶಿಸುವ ಮುನ್ನವೇ ಸಿಗುವ ಶಾಲೆಯು ತನ್ನ ಸೌಂದರ್ಯದಿಂದ ನಿಮ್ಮನ್ನು ಆಕರ್ಷಿಸುತ್ತದೆ. ಈ ಆಕರ್ಷಣೆಗೆ ಪ್ರಮುಖ ಕಾರಣ ಬಣ್ಣದ ಚಿತ್ತಾರಗಳಿಂದ ಕೂಡಿದ ಶಾಲಾ ಕಟ್ಟಡ ಮತ್ತು ಕಟ್ಟಡದ ಮುಂಭಾಗದಲ್ಲಿರುವ ಶಾಲಾ ಉದ್ಯಾನವನ.

ಶಾಲಾ ಕಟ್ಟಡವನ್ನು ಅಂದವಾಗಿ ನಿರ್ವಹಿಸಲಾಗಿದೆ. ಕಟ್ಟಡದ ಗೋಡೆಗಳಿಗೆ ಶಿಶುಸ್ನೇಹಿ ಬಣ್ಣಗಳವನ್ನು ಬಳಿದು, ಶಿಶುಸ್ನೇಹಿ ಚಿತ್ರಗಳನ್ನು ಬರೆಯಲಾಗಿದೆ. ಶಾಲೆಯ ಮುಂಭಾಗದಲ್ಲಿರುವ ಸರಸ್ವತಿಯ ಮೂರ್ತಿಯು ಶಾಲೆಯನ್ನು ಪ್ರವೇಶಿಸುವವರಲ್ಲಿ ಶಾಲೆಯ ಬಗ್ಗೆ ಪೂಜ್ಯ ಭಾವನೆಯನ್ನು ಮೂಡಿಸುತ್ತದೆ. ಸರಸ್ವತಿಯ ಮೂರ್ತಿ ಮತ್ತು ಶಾಲೆಗೆ ಹೊಸದಾಗಿ ಬಣ್ಣ ಬಳಿದು ಇನ್ನೂ ಆಕರ್ಷಕಗೊಳಿಸುವ ಯೋಜನೆಯು ಸಧ್ಯದಲ್ಲಿ ಚಾಲ್ತಿಯಲ್ಲಿದೆ. ಶಾಲೆಯ ಇಳಿಜಾರು ಮೇಲ್ಚಾವಣಿಗೆ ಆಕಾಶ ಮತ್ತು ವಿಮಾನದ ಚಿತ್ರವನ್ನು ಬರೆಯುವ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದ್ದು ಸಧ್ಯದಲ್ಲಿಯೇ ಇದು ಪೂರ್ಣಗೊಂಡು ಮಕ್ಕಳು ಮತ್ತು ಪೋಷಕರನ್ನು ಇನ್ನಷ್ಟು ಆಕರ್ಷಕಗೊಳಿಸಲಿದೆ.






**Figure 1** ಶಾಲೆಯ ಮುಂಭಾಗ

**Figure 2** ಶಾಲೆಯ ಉದ್ಯಾನವನದ ವಿಹಂಗಮ ನೋಟ

ಶಾಲಾ ಉದ್ಯಾನವನವು, ಶಿಕ್ಷಕರು, ಗ್ರಾಮಸ್ಥರು ಮತ್ತು ಯುವಕರ ಬೆವರಿನ ಫಲ. ನೂರಾರು ಸಂಖ್ಯೆಯ ಮಕ್ಕಳನ್ನು ಹೊಂದಿರುವ ಶಾಲೆಗಳು ಮತ್ತು ದೊಡ್ಡ ಗ್ರಾಮಗಳಲ್ಲಿರುವ ಎಸ್ ಡಿ ಎಂ ಸಿ ಗಳೂ ಕೂಡಾ ಮೂಗಿನ ಮೇಲೆ ಬೆರಳಿಡುವಷ್ಟರ ಮಟ್ಟಿಗೆ ಉದ್ಯಾನವನ್ನು ನಿರ್ಮಾಣ ಮಾಡಲಾಗಿದೆ. ಚಂದದ ಉದ್ಯಾನವನ ಮತ್ತು ಹಸಿರಿನ ವಾತಾವರಣವು ಕಲಿಕೆಗೆ ಹೇಗೆ ಪೂರಕ ಎಂಬುದಕ್ಕೆ ಇದಕ್ಕಿಂತ ಇನ್ನೊಂದು ಉದಾಹರಣೆ ಇಲ್ಲ. ಉದ್ಯಾನವನ್ನು ಆಕರ್ಷಕಗೊಳಿಸಲು ಪಾದಚಾರಿ ಮಾರ್ಗವನ್ನು ಮಾಡುವ ಮೂಲಕ ವಿಭಾಗಗಳನ್ನು ಮಾಡಲಾಗಿದೆ. ಅಲ್ಲಿ ಗೋಲ್ಡನ್ ಟ್ರೀ, ತುಜಾ, ಎಜೋರಾ ಮುಂತಾದ ಆಕರ್ಷಣೆಯ ಗಿಡಗಳೂ, ಗುಲಾಬಿ, ಸೇವಂತಿಗೆ ಮುಂತಾದ ಬಣ್ಣ ಬಣ್ಣದ ಗಿಡಗಳು, ಕಣ್ತಣಿಸುವ ಹಸಿರು ಲಾನು, ಔಷಧಿ ಗಿಡಗಳು, ವಿವಿಧ ಕ್ರೋಟಾನ್ ಗಿಡಗಳು, ತರಕಾರಿ ಗಿಡಗಳು ಇವೆ. ಸುಮಾರು 120 ಅಡಿ ಉದ್ದ ಮತ್ತು 50 ಅಡಿ ಅಗಲವಿರುವ ಉದ್ಯಾನದಲ್ಲಿ ವಿಹರಿಸುವುದು ಮನಸ್ಸಿಗೆ ಮುದ ನೀಡುವ ವಿಷಯ. ಶಾಲಾವರಣದ ಸುತ್ತ ಇರುವ ಕಾಂಪೌಂಡ್ ಬದಿಯಲ್ಲಿ ಇರುವ ತೆಂಗಿನ ಮರಗಳು, ನುಗ್ಗೆ ಗಿಡಗಳು ಮತ್ತಿತರ ಹಣ್ಣಿನ ಗಿಡಗಳು ಅಕ್ಷರ ದಾಸೋಹಕ್ಕೆ ಪೂರಕವಾಗಿವೆ. ಗ್ರಾಮ ಪಂಚಾಯಿತಿ ಮತ್ತು ಗ್ರಾಮದ ಯುವಕರ ನೆರವಿನಿಂದ ಉದ್ಯಾನವು ರೂಪ ಪಡೆದಿದೆ. ಇನ್ನೊಂದು ವಿಶೇಷವೆಂದರೆ, ಗ್ರಾಮದ ಜನರೇ ಇವುಗಳ ರಕ್ಷಣೆಯನ್ನೂ ಮಾಡುತ್ತಾರೆ. ರಜೆಯಿದ್ದಾಗಲೂ ಕೂಡಾ ಉದ್ಯಾನವನಕ್ಕೆ ಗ್ರಾಮಸ್ಥರೇ ಆಸರೆ ನೀಡುತ್ತಿದ್ದು ಯಾರ ಉಪಟಗಳಗಳೂ ಇಲ್ಲದಂತೆ ರಕ್ಷಿಸುತ್ತಿದ್ದಾರೆ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾದ, ಶ್ರೀ ನಾಗರಾಜ್ ರವರು ಶಾಲೆ ಮತ್ತು ಸಮುದಾಯದ ನಡುವಿನ ಕೊಂಡಿಯಂತೆ ತಮ್ಮ ಎಸ್‌ಡಿಎಂಸಿಯನ್ನು ಮುನ್ನಡೆಸುತ್ತಿದ್ದಾರೆ.





ಧ್ಯಾನಸ್ಥನಾದ ಸನ್ಯಾಸಿಯೊಬ್ಬನು ಸಾಧನೆಯಂತಿದೆ. ಶಾಲೆಯಲ್ಲಿರುವ ಎಲ್ಲಾ ಮಕ್ಕಳೂ ಕಲಿಕೆಯಲ್ಲೂ ಮುಂದು. ಬಿ+ ಶ್ರೇಣಿಗಿಂತ ಯಾವ ಮಗುವೂ ಹಿಂದುಳಿದಿಲ್ಲ. ಮಕ್ಕಳು ನಿರರ್ಗಳವಾಗಿ ಮತ್ತು ಸರಾಗವಾಗಿ ಕನ್ನಡವನ್ನು ಓದಬಲ್ಲರು ಮತ್ತು ಬರೆಯಬಲ್ಲರು. ಶಾಲಾ ಮಕ್ಕಳು ಕಲಿಕೆಯಲ್ಲಿಯ ಈ ಪರಿಯನ್ನು ನೋಡಿಯೇ ಪೋಷಕರು ಶಾಲೆಗೆ ಪ್ರಶ್ನಾತೀತ ಬೆಂಬಲವನ್ನು ನೀಡುತ್ತಿರುವರು. ಅಂದದ ನಲಿಕಲಿ ಕೋಣೆಯಿದೆ. ಒಪ್ಪ ಓರವಾಗಿ ಜೋಡಿಸಲಾದ ಕಲಿಕೋಪಕರಣಗಳು, ವಿನೂತನವಾದ ವಾಲ್ ಸ್ಲೇಟ್, ದಾನಿಗಳ ನೆರವಿನಿಂದ ಖರೀದಿಸಲಾದ ನಲಿಕಲಿ ಟೇಬಲ್ ಮತ್ತು ಕುರ್ಚಿಗಳು, ಕಲಿಕೆಯನ್ನು ಪ್ರಚೋದಿಸುವ ನಲಿಕಲಿ ಪ್ರಕ್ರಿಯೆ ಇವೆಲ್ಲವೂ ಮಕ್ಕಳ ಕಲಿಕಾ ಸಾಧನೆಗೆ ಸಹಾಯಕವಾಗಿವೆ. ಮುಖ್ಯ ಶಿಕ್ಷಕರಾದ ಶ್ರೀ ನಾಗೇಂದ್ರ ನಾಯಕ್ ಕೆ ಎಸ್ ರವರ ದೂರದೃಷ್ಟಿ, ಶಾಲಾ ಭೌತಿಕ ಪರಿಸರ ಮಾತ್ರವಲ್ಲದೇ ಕಲಿಕೆಯ ಗುಣಮಟ್ಟವನ್ನೂ ಕೂಡಾ ಸಾಧಿಸುವಂತೆ ಮಾಡಿದೆ. ಕಳೆದ ವರ್ಷ ಶಿಕ್ಷಕರ ಕೊರತೆ ಉಂಟಾದಾಗಲೂ ಕೂಡಾ ಎದೆಗುಂದದೆ ತನ್ನ ಕಾರ್ಯವನ್ನು ಮಾಡುತ್ತಿರುವರು.

### "ನನ್ನ ಶಾಲೆ, ನನ್ನ ಕೊಡುಗೆ" ಅಭಿಯಾನ:-

2017-18 ನೇ ಸಾಲಿನಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ನಾಗೇಂದ್ರ ನಾಯಕ್ ಕೆ ಎಸ್ ರವರು ಸಮುದಾಯವನ್ನು ಶಾಲೆಯತ್ತ ಸೆಲೆಯಲು ವಿನೂತವಾದ ಅಭಿಯಾನವೊಂದನ್ನು ಕಂಡುಕೊಂಡರು. ಅದೇ **"ನನ್ನ ಶಾಲೆ, ನನ್ನ ಕೊಡುಗೆ" ಅಭಿಯಾನ**. ಸರ್ಕಾರ ಘೋಷಿಸುವ ಅಭಿಯಾನಗಳನ್ನೇ ಅಳೆದು ತೂಗಿ, ಮಾಡಲೋ ಬೇಡವೋ ಎಂದು ತಾತ್ಸಾರದಿಂದ ನೋಡುವ ಕಾಲದಲ್ಲಿ, ತಾಲ್ಲೂಕಿನ ಮೂಲೆಯಲ್ಲಿರುವ ಶಾಲೆಯೊಂದು ತನ್ನದೇ ಆದ ದೂರದೃಷ್ಟಿಯನ್ನಿಟ್ಟು ಕೊಂಡು ಅಭಿಯಾನವನ್ನು ಆರಂಭಿಸುವುದು ಮತ್ತು ಅದರಲ್ಲಿ ಯಶ ಕಾಣುವುದನ್ನು ನೋಡುವುದೇ ಶಿಕ್ಷಣಾಸಕ್ತರಲ್ಲಿ ಪುಳಕ ಉಂಟು ಮಾಡುತ್ತದೆ. ಈ ಅಭಿಯಾದ ಆರಂಭದ ಫಲದಿಂದಾಗಿ ಶಾಲೆಗೆ ರೂ. 25,000/- ದೇಣಿಗೆ ಹರಿದು ಬಂತು. ಗ್ರಾಮಸ್ಥರೇ ಸೇರಿ ನೀರಿನ ವ್ಯವಸ್ಥೆಯನ್ನು ಮಾಡಿಕೊಟ್ಟದ್ದರಿಂದ ಗ್ರಾಮ ಪಂಚಾಯಿತಿಯೂ ಕೂಡಾ ರೂ1,50,00 ಗಳನ್ನು ನೀಡುವ ಮೂಲಕ ಉದ್ಯಾನವನಕ್ಕೆ ಪೈಪ್‌ಲೈನ್, ಹನಿ ನೀರಾವರಿ ವ್ಯವಸ್ಥೆ ಮತ್ತಿತರ ಕಾಮಗಾರಿಗಳನ್ನು ಮಾಡಿಕೊಟ್ಟಿತು. ಶಾಲಾ ಆವರಣದ ಸುತ್ತಲೂ ಕಾಂಪೌಂಡ್ ನಿರ್ಮಾಣವಾಯಿತು. ದಾನಿಗಳ ನೆರವಿನಿಂದ ಟೈಲ್ಸ್‌ಗಳನ್ನು ಹಾಕಿಸಲಾಗಿದೆ. ಮೈರಾಡಾ ದಿಂದ ಶಾಲಾ ಮೈದಾನವನ್ನು ಸಮತಟ್ಟುಗೊಳಿಸಿ ಆಟೋಟಗಳಿಗೆ ಯೋಗ್ಯವನ್ನಾಗಿ ಮಾಡಲಾಗಿದೆ. ಗ್ರಾಮ ಪಂಚಾಯಿತಿಯಿಂದ ಪೀಠೋಪರಣಗಳ ಪೂರೈಕೆಯಾಗಿ, ಫುಟ್ ಬಾಲ್ ಕಿಟ್ ಮತ್ತು ಕ್ರಿಕೆಟ್ ಕಿಟ್ ಅನ್ನೂ ಕೂಡಾ ನೀಡಲಾಗಿದೆ.

ಗ್ರಾಮದ ಅಭ್ಯುದಯದಲ್ಲಿ ಶಾಲೆಯ ಏಳ್ಗೆಯ ಪಾತ್ರವು ನೇರವಾಗಿ ತಕ್ಷಣ ಕಾಣದಿದ್ದರೂ ಧೀರ್ಘಕಾಲೀನ ಪರಿಣಾಮ ಬೀರುತ್ತದೆಯೆಂಬುದು ನಾವು ನೀವೆಲ್ಲರೂ ತಿಳಿದಿರುವ ವಿಷಯ. ಶಾಲೆಯೊಂದು ಒಂದು ಸಂಸ್ಥೆಯಾಗಿ, ಎಲ್ಲ ದಿಕ್ಕಿನಲ್ಲಿಯೂ ಬೆಳೆದು ಎಲ್ಲ ಕ್ಷಿತಿಜಗಳನ್ನೂ ಮುಟ್ಟಬೇಕು. ಹಾಗಾದಲ್ಲಿ ಮಾತ್ರ ಸಮುದಾಯದ ನಿರೀಕ್ಷೆ ಈಡೇರುತ್ತದೆ. ಅದಕ್ಕಾಗಿ ಭಾಗೀದಾರರಲ್ಲಿ ಧೃಢ ಮನಸ್ಸು ಬೇಕು. ಮುಖ್ಯ ಶಿಕ್ಷಕರಾದ ಶ್ರೀ ನಾಗೇಂದ್ರ ನಾಯಕ್ ಕೆ ಎಸ್, ಶಿಕ್ಷಕರು ಮತ್ತು ಗ್ರಾಮಸ್ಥರಂತೆ ಕನಸು ಕಾಣುವವರು ಬೇಕು. ಆ ಕನಸನ್ನು ನನಸು ಮಾಡಲು ಹಂಬಲಿಸಿ ಹಪಹಪಿಸಬೇಕು. ಆಗ ಮಾತ್ರ ಸರ್ಕಾರಿ ಶಾಲೆಗಳೆಂಬ ಸಂಸ್ಥೆಗಳು ಸಾಮಾಜಿಕ ನ್ಯಾಯವನ್ನು ನೀಡಬಲ್ಲವು. ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಬರಿದೇ ಬೊಗಳೆ ಬಿಡುವುದಕ್ಕಿಂತ ಇಂತಹವರು ಹಾಕಿಕೊಟ್ಟ ಮಾದರಿಯನ್ನು ನಾವೆಲ್ಲರೂ ಅನುಸರಿಸೋಣ, ಪಸರಿಸೋಣ.







